**ನಾಂದಿಪದ**

# ನಮಗೆ ನಾವೇ ಕನ್ನಡಿ

ದೇಹದ ಬಿಂಬವನ್ನು ಕನ್ನಡಿ ತೋರಿಸಬಲ್ಲದು. ಅಂತರಂಗದ ಬಿಂಬವನ್ನು? ಒಳಗಣ ಬಿಂಬವನ್ನು ಕಾಣಿಸುವ ಕನ್ನಡಿಗಳನ್ನು ನಾವೇ ಸೃಷ್ಟಿಸಿಕೊಳ್ಳಬೇಕು. ಅಂತರಂಗವನ್ನು ಕಾಣಿಸುವಂತಹ ಕನ್ನಡಿಗಳ ರೂಪದಲ್ಲಿ ಸೃಜನಶೀಲ ಉತ್ಪನ್ನಗಳನ್ನು ಗಮನಿಸಬಹುದು. ಅಂಥದೊಂದು ಜನಪ್ರಿಯ ಕನ್ನಡಿ ಸಾಹಿತ್ಯ. ನಮ್ಮನ್ನು ನಮಗೆ ಕಾಣಿಸುವ ಸಾಹಿತ್ಯದ ಸಾಮರ್ಥ್ಯವನ್ನು ಪ್ರಕಟಪಡಿಸುವಂತಹ ಬರಹಗಳನ್ನು ಒಳಗೊಳ್ಳುವ ನಿಟ್ಟಿನಲ್ಲಿ 'ಮಯೂರ'ದ ಸಂಚಿಕೆಗಳು ರೂಪುಗೊಳ್ಳುತ್ತಿರುವುದನ್ನು ಸಹೃದಯರು ಬಲ್ಲರು.

ಇದು, ಕನ್ನಡನಾಡಿಗೆ 1973ರ ನವೆಂಬರ್ 1ರಂದು 'ಕರ್ನಾಟಕ' ಎಂದು ನಾಮಕರಣವಾದ ಚಾರಿತ್ರಿಕ ಘಟನೆಗೆ ಐವತ್ತು ವರ್ಷಗಳು ತುಂಬಿರುವ ಸಂದರ್ಭ. ಈ ಸಂಭ್ರಮ 'ಮಯೂರ'ದ ಪ್ರಸಕ್ತ ಸಂಚಿಕೆಯ ಬಿತ್ತವೂ ಆಗಿದೆ. ಯಾವುದೇ ಸಂಭ್ರಮ ಅರ್ಥಪೂರ್ಣಗೊಳ್ಳುವುದು ಅದು ಅವಲೋಕನದ ಸ್ವರೂಪವನ್ನು ಪಡೆಯುವುದರಿಂದಾಗಿ. ಈ ವಿಮರ್ಶಾಪ್ರಜ್ಞೆಯನ್ನು ಸಂಚಿಕೆಯ ಎರಡು ಬರಹಗಳಲ್ಲಿ ಗುರ್ತಿಸಬಹುದು. ಕೆನಡಾ ಕನ್ನಡಿಗ ಶಶಿಕುಮಾರ್, ನಾಡಿನ ಅರ್ಧ ಶತಮಾನದ ಅವಧಿಯಲ್ಲಿ ನೂರರ ಪ್ರಾಯದ ಕನ್ನಡ ವಿಮರ್ಶೆಯ ಮನಸ್ಸು ಪ್ರಕಟಗೊಂಡ ಮುಖ್ಯ ಸ್ವರೂಪಗಳನ್ನು ಚರ್ಚಿಸಿದ್ದಾರೆ. ಸಾಹಿತ್ಯ ವಿಮರ್ಶೆಗೆ ಅಗತ್ಯವಾದ ರಾಜಕೀಯ ಪ್ರಜ್ಞೆಯನ್ನು ಚರ್ಚಿಸುವ ಈ ಬರಹ, ಕನ್ನಡ ವಿಮರ್ಶೆಯ 'ಸಂಪ್ರದಾಯಭಂಗ'ದ ಪ್ರಸಂಗಗಳನ್ನು ಗುರ್ತಿಸಿ, ಅವುಗಳ ಚಾರಿತ್ರಿಕ ಮಹತ್ವವನ್ನು ವಿಶ್ಲೇಷಿಸಿದೆ.

ವಿಕ್ರಮ ವಿಸಾಜಿ ನಡೆಸಿಕೊಟ್ಟಿರುವ ವಿಮರ್ಶಕ ಕೆ.ವಿ. ನಾರಾಯಣ ಅವರ ಸಂದರ್ಶನ ಈ ಸಂಚಿಕೆಯ ಮತ್ತೊಂದು ವಿಶೇಷ. ಶಶಿಕುಮಾರ್ ಅವರ ವಿಶ್ಲೇಷಣೆಯನ್ನು, ಯುವ ವಿಮರ್ಶಕನೊಬ್ಬನ ಸೃಜನಶೀಲ ಸ್ಪಂದನದ ರೂಪದಲ್ಲಿಯೂ, ಕೆವಿಎನ್‌ರ ಮಾತುಗಳನ್ನು ಹಿರಿಯ ವಿಮರ್ಶಕನ ಅನುಭವದ ಅಭಿವ್ಯಕ್ತಿಯ ರೂಪದಲ್ಲೂ ಗಮನಿಸಬಹುದು. ಕುತೂಹಲದ ಸಂಗತಿಯೆಂದರೆ, ಎರಡೂ ಮನಸ್ಸುಗಳು, ಸಮಕಾಲೀನ ಕನ್ನಡ ವಿಮರ್ಶೆ ಪಡೆಯಬೇಕಾಗಿರುವ ಹೊಸ ಕಸುವಿನ ಕುರಿತು ಒತ್ತಿಹೇಳಿವೆ. ಈ ಎರಡೂ ಬರಹಗಳನ್ನು ಕನ್ನಡ ಲೇಖಕರು ಗಂಭೀರವಾಗಿ ಪರಿಗಣಿಸಿ, ಚರ್ಚಿಸುತ್ತಾರೆನ್ನುವುದು 'ಮಯೂರ'ದ ನಂಬಿಕೆ.


'ಕರ್ನಾಟಕ 50'ರ ಸಂಭ್ರಮವನ್ನು ಸಂಚಿಕೆಯ ಕಥೆ, ಕವಿತೆಗಳಲ್ಲಿಯೂ ಕಾಣಬಹುದು. ಕನ್ನಡ ಸಾಹಿತ್ಯವನ್ನು ಜೀವಂತವಾಗಿರಿಸಿರುವ ಕವಿ-ಕಥೆಗಾರರ ರಚನೆಗಳು 'ಕನ್ನಡ ಮಾಸ'ದ ಸಂಚಿಕೆಯ ಚೆಲುವನ್ನು ಹೆಚ್ಚಿಸಿವೆ. ಆಧುನಿಕ ಕರ್ನಾಟಕವನ್ನು ಶ್ರೀಮಂತಗೊಳಿಸಿದ ಚೇತನಗಳಲ್ಲೊಬ್ಬರಾದ ರಾಜಪುರೋಹಿತರ ಕುರಿತ ನೆನಪುಗಳ ಕಿರುಬರಹ, ನಡೆದುಬಂದ ದಾರಿಯನ್ನು ಕೃತಜ್ಞತೆಯಿಂದ ನೆನಪಿಸಿಕೊಳ್ಳುವ ಪ್ರಯತ್ನವಾಗಿದೆ.

ನಡೆದುಬಂದ ದಾರಿಯತ್ತ ಕಣ್ಣು ಹೊರಳಿಸುವಂತೆ ಒತ್ತಾಯಿಸುವ ಇಲ್ಲಿನ ಬರಹಗಳಲ್ಲಿ, ವರ್ತಮಾನದ ದಾರಿಯನ್ನು ಕಣ್ಣರಳಿಸಿ ನೋಡುವಂತೆ ಮಾಡಬಲ್ಲ ಶಕ್ತಿಯಿದೆ; ನಡೆಯಬೇಕಾದ ದಾರಿಗೆ ತೋರುಬೆರಳುಗಳ ರೂಪದಲ್ಲಿಯೂ ಮುಖ್ಯವಾದ ಬರಹಗಳಿವು.

'ಸಾಂಸ್ಕೃತಿಕ ಕನ್ನಡಿ'ಯಿಂದ ಆಗಬೇಕಾದುದು ಇದೇ ಅಲ್ಲವೇ?

**-ಮಯೂರ ಬಳಗ**

**editormy@mayura.co.in**



ಕಲೆ: ಬಸವರಾಜ ಎಸ್. ಕಲೆಗಾರ